# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Ecoren Energy India Private Limited ರವರಿಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ದಿನಾಂಕ:11.09.2018 ರ ಹಂಚಿಕೆ ಸಮಿತಿ ಸಭೆ.
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/EEIPL-5 MW (2.5+2.5)/Ayyanahalli/F-1747/2021/2392, ದಿನಾಂಕ:13.08.2021

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ (1)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Ecoren Energy India Private Limited ರವರಿಗೆ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿಯಲ್ಲಿ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಬೊಮ್ಮನಹಳ್ಳಿ, ಮಾಕನಡುಕು, ಅಯ್ಯನಹಳ್ಳಿ ಮತ್ತು ಚಿಕ್ಕಜೋಗಿಹಳ್ಳಿ ಗ್ರಾಮಗಳಲ್ಲಿ 2.5 ಮೆ.ವ್ಯಾ ಸಾಮರ್ಥ್ಯ ಹಾಗೂ ಚಿಕ್ಕಜೋಗಿಹಳ್ಳಿ ತಾಂಡ ಮತ್ತು ಸಿದ್ದಾಪುರ ಗ್ರಾಮಗಳಲ್ಲಿ 2.5 ಮೆ.ವ್ಯಾ ಸಾಮರ್ಥ್ಯ ಸೇರಿ ಒಟ್ಟು 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳವು ಖಾಸಗೀ ಜಮೀನಾಗಿದ್ದು, ಸದರಿ ಸ್ಥಳದಲ್ಲಿ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ 5 ಮೆ.ವ್ಯಾ (2.5+2.5) ಸಾಮರ್ಥ್ಯಕ್ಕೆ ಹಂಚಿಕೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಲಾಗಿತ್ತು.

ಮೇಲೆ ಓದಲಾದ ಕ್ರ.ಸಂ.(2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು M/s Ecoren Energy India Private Limited ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಬೊಮ್ಮನಹಳ್ಳಿ, ಮಾಕನಡುಕು, ಅಯ್ಯನಹಳ್ಳಿ ಮತ್ತು ಚಿಕ್ಕಜೋಗಿಹಳ್ಳಿ ಗ್ರಾಮಗಳಲ್ಲಿ 2.5 ಮೆ.ವ್ಯಾ ಸಾಮರ್ಥ್ಯ ಹಾಗೂ ಚಿಕ್ಕಜೋಗಿಹಳ್ಳಿ ತಾಂಡ ಮತ್ತು ಸಿದ್ದಾಪುರ ಗ್ರಾಮಗಳಲ್ಲಿ 2.5 ಮೆ.ವ್ಯಾ ಸಾಮರ್ಥ್ಯ ಸೇರಿ ಒಟ್ಟು 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮೂರನೇ ವ್ಯಕ್ತಿಗೆ ವೀಲಿಂಗ್ ಮುಖಾಂತರ ಮಾರಾಟ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಿ, ದಿನಾಂಕ: 11.09.2018 ರ ಹಂಚಿಕೆ ಸಮಿತಿಯು ಅನುಮೋದಿಸಿರುವಂತೆ ಹಂಚಿಕೆ ಆದೇಶ ಹೊರಡಿಸುವ ಕುರಿತು ತಾಂತ್ರಿಕ ಮಾಹಿತಿಯನ್ನು ಒಳಗೊಂಡ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

**Geographical area description for 5 MW capacity Wind Power Project of M/s Ecoren Energy India Private Limited**

| Sl. No | Topo sheet No. | Proposed capacity in MW | Near by villages of the proposed area and district. | Geographical area description of the project |
|---|---|---|---|---|
| 1 | 57 B/6 | 2.5 MW (5 Nos x 500 kW) | Bommanahalli, Makanaduku, Ayinahalli and Chikka Jogihalli villages of Kudligi taluk, Bellary district | In the villages of (1) Bommanahalli, (2) Makanaduku, (3) Aiyanahalli and (4) Chikka Jogihalli, it is proposed to implement the wind power project by the developer. **Peaks:** 652, 631 and 658 m AMSL |
| 2 | 57 B/6 | 2.5 MW (5 Nos x 500 kW) | Chikka Jogihalli Tanda and Siddapur villages of Kudligi taluk, Bellary district | In the villages of (1) Chikka Jogihalli Tanda (2) Siddapur it is proposed to implement the wind power project by the developer. **Peaks:** 654, 629, 643 and 671 m AMSL |
| | Total | 5 MW | | |

...2

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ:07.09.2021 ರ ಆದೇಶದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ನೀಡುವ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 1061/2019 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪಿಲ್ ಸಂಖ್ಯೆ: 9619-9637/2019 ರಲ್ಲಿ ಮಾನ್ಯ ನ್ಯಾಯಾಲಯಗಳು ನೀಡುವ ಅಂತಿಮ ಆದೇಶಗಳಗೊಳಪಟ್ಟು ಬ್ಯಾಂಕಿಂಗ್ ಸೌಲಭ್ಯವನ್ನು ದಿನಾಂಕ: 31.03.2022 ರವರೆಗೆ ವಿಸ್ತರಿಸಿ ಆದೇಶಿಸಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 188 ಎನ್‌ಸಿಇ 2021**
**ಬೆಂಗಳೂರು, ದಿನಾಂಕ:27/09/2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Ecoren Energy India Private Limited ರವರಿಗೆ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಬೊಮ್ಮನಹಳ್ಳಿ, ಮಾಕನಡುಕು, ಅಯ್ಯನಹಳ್ಳಿ ಮತ್ತು ಚಿಕ್ಕಜೋಗಿಹಳ್ಳಿ ಗ್ರಾಮಗಳಲ್ಲಿ 2.5 ಮೆ.ವ್ಯಾ ಸಾಮರ್ಥ್ಯ ಹಾಗೂ ಚಿಕ್ಕಜೋಗಿಹಳ್ಳಿ ತಾಂಡ ಮತ್ತು ಸಿದ್ದಾಪುರ ಗ್ರಾಮಗಳ್ಳಿ 2.5 ಮೆ.ವ್ಯಾ ಸಾಮರ್ಥ್ಯ ಸೇರಿ ಒಟ್ಟು 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

**Geographical area description for 5 MW capacity Wind Power Project of M/s Ecoren Energy India Private Limited**

| Sl. No | Topo sheet No. | Proposed capacity in MW | Near by villages of the proposed area and district. | Geographical area description of the project |
|---|---|---|---|---|
| 1 | 57 B/6 | 2.5 MW (5 Nos x 500 kW) | Bommanahalli, Makanaduku, Ayinahalli and Chikka Jogihalli villages of Kudligi taluk, Bellary district | In the villages of (1) Bommanahalli, (2) Makanaduku, (3) Aiyanahalli and (4) Chikka Jogihalli, it is proposed to implement the wind power project by the developer. **Peaks:** 652, 631 and 658 m AMSL |
| 2 | 57 B/6 | 2.5 MW (5 Nos x 500 kW) | Chikka Jogihalli Tanda and Siddapur villages of Kudligi taluk, Bellary district | In the villages of (1) Chikka Jogihalli Tanda (2) Siddapur it is proposed to implement the wind power project by the developer. **Peaks:** 654, 629, 643 and 671 m AMSL |
| | **Total** | **5 MW** | | |

**ಷರತ್ತುಗಳು:**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರದ ಆದೇಶ ಸಂಖ್ಯೆ:ಇಎನ್ 435 ಎನ್‌ಸಿಇ 2011, ದಿನಾಂಕ :06.01.2012ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

...3